## ಮಾತು-ಕತೆ

ನಂತರ ಮಾತು ಹೊರಳಿದ್ದು – ಸಾಹಿತ್ಯದ ಕಲಾತ್ಮಕತೆಗೂ ಅದರ ಕ್ಲಿಷ್ಟತೆಗೂ ಸಂಬಂಧ ಇದೆಯಾ? ಸಾಹಿತ್ಯ ಎಲ್ಲರಿಗಲ್ಲ ಎನ್ನುವ ಮೂಲಕ ಅದನ್ನು ಸೀಮಿತಗೊಳಿಸುತ್ತಿದ್ದೇವೆಯಾ? ಎನ್ನುವ ಜಿಜ್ಞಾಸೆಯತ್ತ. ಇದಕ್ಕೆ ಉತ್ತರ ರೂಪದಲ್ಲಿ ದಿವಾಕರ್ ಘಟನೆಯೊಂದನ್ನು ನೆನಪಿಸಿಕೊಂಡರು. ''ಕಳೆದ ವರ್ಷ ನಾವು ಕೆಲವರು ಖಾಸನೀಸರ 'ತಬ್ಬಲಿಗಳು' ಕಥೆಯನ್ನು ಚರ್ಚಿಸುತ್ತಿದ್ದೆವು. ಒಬ್ಬ ಹುಡುಗ ಅದನ್ನು ಕಥೆಯಲ್ಲ ಎಂದ. ಅದರ ಸಾಧ್ಯತೆಗಳ ಬಗ್ಗೆ ನಾನು ವಿವರಿಸಿದೆ. ಅವನು ಒಪ್ಪಲಿಲ್ಲ. ಇನ್ನೊಂದು ಸಲ ಓದಿ ಎಂದೆ. ಓದುವುದಿಲ್ಲ ಎಂದ. ಪರಿಸ್ಥಿತಿ ಹೀಗಿರುವಾಗ ಅಭಿರುಚಿ ರೂಪಿಸುವ ಕೆಲಸ ಹೇಗೆ ಸಾಧ್ಯ? ಇಂಥ ಸಂದರ್ಭಗಳನ್ನು ವಿವರಿಸುವುದು ಹೇಗೆ?''

''ಪ್ರತಿಯೊಂದು ಕಾಲವೂ ತನ್ನದೇ ಆದ ಅನುಭವದ ಸೀಮೆಗಳನ್ನು ಹಾಗೂ ಸಂವೇದನೆಯ ಸ್ವರೂಪ, ಬರವಣಿಗೆಯ ರೀತಿಯನ್ನು ಆಯ್ಕೆ ಮಾಡಿಕೊಳ್ಳುತ್ತೆ. ಯಾವುದು ಉಳಿಯುತ್ತೆ ಎನ್ನುವುದನ್ನು ಕಾಲದ ಪ್ರಶ್ನೆ'' ಎಂದರು ಎಚ್‌ಎಸ್‌ಆರ್.

ದಿವಾಕರ್ ವಿಮರ್ಶೆಯ ಅಭಾವದ ಪ್ರಶ್ನೆಯನ್ನು ಮತ್ತೆ ಕೈಗೆತ್ತಿಕೊಂಡರು. ''ಇದು ಮತ್ತೆ ವಿಮರ್ಶೆಯ ಕೆಲಸ. ಹೊಸ ತಲೆಮಾರಿನ ಸಾಹಿತ್ಯವನ್ನೂ ನಿಮ್ಮ ಪೀಳಿಗೆಯವರೇ ವಿಮರ್ಶಿಸಬೇಕು. ಹೊಸ ವಿಮರ್ಶಕರು ಬರುತ್ತಿಲ್ಲ. ಯಾಕೆ ಬರುತ್ತಿಲ್ಲ?''

''ಸಾಹಿತ್ಯದಲ್ಲಿ ತೊಡಗಬೇಕಾದ ವಿಮರ್ಶಕ ರೂಪುಗೊಳ್ಳಬೇಕಾದ ವಿಶ್ವವಿದ್ಯಾಲಯಗಳಲ್ಲಿ ಅದಕ್ಕೆ ಬೇಕಾದ ಉಪಕ್ರಮಗಳಿಲ್ಲ. ವಿಮರ್ಶೆಯ ಬರವಣಿಗೆಗೆ ತಕ್ಕ ವೇದಿಕೆಗಳೂ ಇಲ್ಲ. ಕ್ಲಾಸ್‌ರೂಂಗಳಲ್ಲೂ ಆ ಬಗೆಯ ವಾತಾವರಣವಿಲ್ಲ. ಸಾಹಿತ್ಯವನ್ನು ಈಗ ಕಲಿಸುತ್ತಿರುವವರು ಸಾಹಿತ್ಯದ ವಿದ್ಯಾರ್ಥಿಗಳಾಗಿ ಉಳಿದಿಲ್ಲ. ಸಾಹಿತ್ಯವನ್ನು ಗಂಭೀರವಾಗಿ ಓದಿಕೊಂಡ ಇಪ್ಪತ್ತೈದು ಜನರ ಹೆಸರು ಹೇಳಿ ಎಂದರೆ, ಆ ಹೆಸರುಗಳು ಕನ್ನಡ ಮೇಷ್ಟ್ರುಗಳಾಗಿ ಇರುವ ಸಾಧ್ಯತೆ ಕಡಿಮೆ. ಇದನ್ನು ಹೇಗೆ ನೋಡುವುದು? ಕನ್ನಡ ಸಾಹಿತ್ಯದಲ್ಲಿ ಇಪ್ಪತ್ತನೇ ಶತಮಾನದಷ್ಟು ಸಾಹಿತ್ಯದ ಶ್ರೀಮಂತಿಕೆಯನ್ನು ಮತ್ತೆ ಊಹಿಸಿಕೊಳ್ಳುವುದು ಕಷ್ಟ ಎನ್ನಿಸುತ್ತೆ.''

ಎಚ್‌ಎಸ್‌ಆರ್ ಮಾತುಗಳಲ್ಲಿ ವಿಷಾದ ಇದ್ದಂತಿತ್ತು. ತಮ್ಮ ಪ್ರಶ್ನೆಯನ್ನು ದಿವಾಕರ್ ಮತ್ತಷ್ಟು ವಿಸ್ತರಿಸಿದರು. ''ಸಾಹಿತ್ಯದಲ್ಲಿನ ಗುಣಮಟ್ಟದ ಏರುಪೇರು ಎಲ್ಲ ಕಾಲದಲ್ಲೂ ಇರುತ್ತೆ. ಆದರೆ, ಬರುತ್ತಿರುವ ಸಾಹಿತ್ಯವನ್ನು ಬೆಲೆಗಟ್ಟುವ ಕೆಲಸ ನಡೆಯಬೇಕಾಗುತ್ತೆ. ನೀವೇ ಹೇಳಿದ ಹಾಗೆ ಬೇರೆಬೇರೆ ಜಾತಿ–ಧರ್ಮದ ಸಂವೇದನೆಗಳು, ಹೆಣ್ಣುಮಕ್ಕಳ ಬರವಣಿಗೆ – ಇದೆಲ್ಲಕ್ಕೆ ವಿಮರ್ಶೆ ದೊರಕಿದೆಯಾ?''

''ಹತ್ತು ಕಥೆಗಾರರು ಬರೆಯುವ ಸಂದರ್ಭದಲ್ಲಿ, ಒಬ್ಬ ಕಥೆಗಾರನ ಬಗ್ಗೆ ಬರೆದಾಗ ಅದು ಎಲ್ಲರಿಗೂ ಅನ್ವಯವಾಗಿರುತ್ತೆ. ಆರಿಫ್ ರಾಜಾನ ಬಗ್ಗೆ ಬರೆಯುವ ವಿಮರ್ಶೆ ಅದೇ ಕಾಲಕ್ಕೆ ಅನೇಕ ಕವಿಗಳಿಗೆ ಬರೆದ ವಿಮರ್ಶೆಯಾಗಿರುತ್ತೆ. ಹೀಗೆ ಅನೇಕ ಲೇಖಕರಿಗೆ ಅನ್ವಯವಾಗುವ ಹಾಗೆ ಬರೆಯದೆ ಹೋದರೆ ಅದು ಹೊಗಳಿಕೆಯಾಗಿ ಉಳಿದಿರುತ್ತೆ ಅಷ್ಟೇ. ಲೇಖಕನೊಬ್ಬ ತನ್ನ ಆಪ್ತವಲಯದ ಮೂಲಕ ವಿಮರ್ಶೆ ಕಂಡುಕೊಳ್ಳಬೇಕಾಗುತ್ತದೆ. ಸೃಜನಶೀಲ ಸಾಹಿತ್ಯವನ್ನು ಎಷ್ಟರಮಟ್ಟಿಗೆ ಓದುತ್ತಿದ್ದಾರೆ ಎನ್ನುವುದೇ ಪ್ರಶ್ನೆಯಾಗಿರುವಾಗ ವಿಮರ್ಶೆ ಯಾರು ಓದ್ತಾರೆ ಎನ್ನುವುದೂ ಪ್ರಶ್ನೆಯೇ'' ಎಂದರು ಎಚ್‌ಎಸ್‌ಆರ್.

ವಿಮರ್ಶೆಯ ಚರ್ಚೆಗೆ ಪೂರಕವಾಗಿ ಮಾತು ಹೊರಳಿದ್ದು ಪ್ರಶಸ್ತಿ–ಪುರಸ್ಕಾರಗಳತ್ತ. ''ಇವತ್ತು ಯುವ ಲೇಖಕರಿಗೆ ವಿಮರ್ಶೆಯ ಬದಲು, ಓದಿನ ಬದಲು, ಪ್ರಸಿದ್ಧಿ ಮತ್ತು